ವರ್ಷಗಳ ಹಿಂದೆ ಸ್ಪೆಸಿಫಿಕ್ ಆಗಿ ಸರ್ಕಲ್ ಇನ್ಸ್‌ಪೆಕ್ಟರ್, ಡಿವೈ ಎಸ್‌ಪಿ ಇದ್ದರು ಒಂದು ಸಮಾವೇಶಕ್ಕೆ ರೈತ ಸಂಘದವರು ಬರತಕ್ಕ ವಿಚಾರದಲ್ಲಿ ಶುರವಾದಂತಹ ಘಟನೆ. ಪೋಲೀಸ್‌ನವರು ವೈಯಕ್ತಿಕ ದ್ವೇಷವಾಗಿ ತೆಗೆದುಕೊಂಡರು. ಯಾರು ಹಸಿರು ಟಾವೆಲ್ ಹಾಕಿರುತ್ತಾರೆ, ಅವರ ಮೇಲೆ ಕಾನೂನು ವಿರೋಧ ಚಟುವಟಿಕೆಗಳನ್ನು ಮಾಡತಕ್ಕ ಕೆಲಸವನ್ನು ಮಾಡಿದರು. ಜೊತೆಗೆ ಅದೇ ಜವಾಬ್ದಾರಿ ಶ್ರೀ ಜಿ. ಮಾದೇಗೌಡರ ಮೇಲೂ ಸೆಕ್ಷನ್ 307ರ ಮೇಲೆ ಕೇಸ್ ಹಾಕಿ ಮೊಕದ್ದಮೆ ಹಾಕಿರತಕ್ಕ ಉದಾಹರಣೆ ಇದೆ. ಮಾದೇಗೌಡರು ಎಂದಲ್ಲ. ಯಾರೇ ಆಗಲಿ. ಕಾನೂನು ಪ್ರಕಾರ ಕೆಲಸ ಮಾಡತಕ್ಕ ಒಂದು ಪೋಲೀಸ್ ಇಲಾಖೆ ಬ್ರಿಟೀಷ್‌ನವರ ಕಾಲದ ಆಡಳಿತ ವ್ಯವಸ್ಥೆಯನ್ನು ಮಾಡತಕ್ಕ ನಿಲುವಿಗೆ ಹೋಗಬಾರದು. ಪೋಲೀಸ್ ಇಲಾಖೆಗೆ ಅತ್ಯಂತ ಜವಾಬ್ದಾರಿಯಾಗಿ ಕಾನೂನು ರಕ್ಷಣೆ ಮಾಡಿ ಜನರಿಗೆ ತಿಳುವಳಿಕೆ ಕೊಡತಕ್ಕ ಕೆಲಸ ಮಾಡಬೇಕು. ಮೊನ್ನೆ ಇನ್ನೊಂದು ಇನ್ಸಿಡೆಂಟ್ ಆಯಿತು. ಕಬ್ಬಿನ ಹೋರಾಟಕ್ಕೆ ಹೋಗಿ ಕಾಳಮುದ್ದನ ದೊಡ್ಡಿಯಲ್ಲಿ ನಾವು ನಮ್ಮ ನ್ಯಾಯವಾದ ಬೇಡಿಕೆಯನ್ನು ಇಡುತ್ತಿರಬೇಕಾದರೆ ಅಲ್ಲಿರುವ ಪೋಲೀಸ್‌ನವರಿಗೂ ಜನರಿಗೂ ಸ್ವಲ್ಪ ಘರ್ಷಣೆಯಾಗಿ ಒಬ್ಬ ದಫೇದಾರ್ ಜಾರಿ ಬಿದ್ದರು. ಆದರೆ ಮೂರ್ನಾಲ್ಕು ಜನರ ಮೇಲೆ ಛಾರ್ಜ್ ಶೀಟ್ ಹಾಕಿದರು. ಯಾರ ಮೇಲೆ ಅವರು ಹೊಡೆದಿದ್ದಾರೆ ಎಂದು ಖಚಿತವಾಗಿ ಹೇಳಿದಂತಹ ವ್ಯಕ್ತಿ ಶ್ರೀ ಶಿವನಂಜಪ್ಪನವರು ಆ ಸಮಯದಲ್ಲಿ 12 ಗಂಟೆಗೆ ಸರಿಯಾಗಿ ಕೋರ್ಟಿನಲ್ಲಿದ್ದರು. 12 ಗಂಟೆ ಸಮಯದಲ್ಲಿ ಕೋರ್ಟಿನಲ್ಲಿದ್ದಂತಹ ವ್ಯಕ್ತಿ ಮೇಲೆ ಈತ ಪೋಲೀಸ್‌ನವರ ಮೇಲೆ ಹೊಡೆದಿದ್ದಾನೆ ಎಂದು ಉದ್ದೇಶ ಪೂರ್ವಕವಾಗಿ ಕೇಸ್ ಹಾಕಿರುವುದರಿಂದ ಸಂಬಂಧಪಟ್ಟ ನ್ಯಾಯಾಲಯದ ಮುಖ್ಯಸ್ಥರು ನಗತಕ್ಕ ಒಂದು ವ್ಯವಸ್ಥೆ ಅಲ್ಲಿ ಆಯಿತು.

9. ಅಧ್ಯಕ್ಷರಿಂದ ಸೂಚನೆ:

ವಿಷಯ:- ಸದನದ ಒಳಗೆ ಸೆಲ್ಯೂಲಾರ್ ಫೋನ್/ಪೇಜರ್ ತಂದಿರುವ ಬಗ್ಗೆ.

ಶ್ರೀ ವಾಟಾಳ್ ನಾಗಾರಾಜ್:- ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಒಂದು ವಿಶೇಷವಾದಂತಹ ಪ್ರಸಂಗ. ನನ್ನ ಹಿಂದೆ ಏನೋ ಕೊಂಯ್ ಕೊಂಯ್ ಎಂದು ಶಬ್ದ ಬರುತ್ತಿದೆ. ಸದನಕ್ಕೆ ಏನು ಬೇಕಾದರೂ ತರಬಹುದೇ ನಾವು? ನಾವು ದೂರವಾಣಿ ತಂದು ಇಲ್ಲಿ ಇಟ್ಟುಕೊಂಡಿದ್ದೇವಲ್ಲಾ? ಇದು ಸದನೋ ಏನು ಇದು? ಇದಕ್ಕೆ ತಾವು ಏನಾದರೂ ಹೇಳಬೇಕು. ಯಾರು ಏನು ಬೇಕಾದರೂ ತರಬಹುದೇ? ಅಲ್ಲಿ ಕುಳಿತುಕೊಂಡು ಕಿವಿಯಲ್ಲಿ ಕೇಳುತ್ತಿದ್ದಾರೆ. ನಾನು ಏನಪ್ಪಾ ಎಂದು ನೋಡುತ್ತಿದ್ದೇನೆ. ಅಥವಾ ಇನ್ನೇನಾದರೂ ಹೆಚ್ಚು ಕಡಿಮೆ ಆದರೆ ಗತಿ ಏನು? ಆದೇನು ಸ್ವಲ್ಪ ಕೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಸೆಲ್ಯುಲಾರ್ ಫೋನ್ ಎಲ್ಲಿ ಬೇಕಾದರೂ ಇಟ್ಟುಕೊಳ್ಳಬಹುದು. ಇಟ್ಟುಕೊಳ್ಳುವುದಕ್ಕೆ ತೊಂದರೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದು ಸರಿ ಇಲ್ಲ. ನಾನು ಇದನ್ನು ಒಪ್ಪುವುದಿಲ್ಲ. ಅವರು ನನ್ನ ಸ್ನೇಹಿತರು ಇರಬಹುದು. ನಾನು ಇದನ್ನು ಒಪ್ಪುವುದಿಲ್ಲ. ಫೋನ್ ತಂದು ಇಲ್ಲಿ ಇಟ್ಟುಕೊಳ್ಳುವುದು ಎಂದರೆ ಏನು? ನಾವು ನಾಳೆ ಏನು ಬೇಕಾದರೂ ತಂದು ಇಟ್ಟುಕೊಳ್ಳುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಇದು ಪಾಕೆಟ್‌ನಲ್ಲಿ ಇಟ್ಟುಕೊಳ್ಳತಕ್ಕ ಫೋನ್ ಸ್ವಾಮಿ. ನಾನು ಇಲ್ಲಿ ಇಟ್ಟುಕೊಂಡಿರುವುದಕ್ಕೆ ಅಡ್ಡಿ ಏನೂ ಇಲ್ಲ, ಅದಕ್ಕೋಸ್ಕರ ಇಟ್ಟುಕೊಂಡಿದ್ದೇನೆ. ಅದಕ್ಕೆ ಇವರು ಅಡ್ಡಿ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್:- ಸಾರ್ ಅವರು ನಮ್ಮ ಸ್ನೇಹಿತರು ಇರಬಹುದು. ಆದರೆ ನಾನು ಒಪ್ಪುವುದಿಲ್ಲ. ತಾವು ನೋಡಿ.

ಅಧ್ಯಕ್ಷರು:- ಈಗ ನೀವು ಹೇಳುವವರೆಗೆ ಅವರು ಸೆಲ್ಯುಲಾರ ಫೋನ್ ತಂದಿದ್ದಾರೆ ಅವರ ಹತ್ತಿರ ಇದೆ ಎಂದು ನನಗೆ ಗೊತ್ತಿರಲಿಲ್ಲ. ಬೆಳಿಗ್ಗೆ ಇಲ್ಲೇ ಎಲ್ಲೋ ಒಂದು ಕಡೆ ಶಬ್ದ ಆಯಿತು. ಪೇಜರ್ ಎಂದು ತಿಳಿದುಕೊಂಡೆ.

ಶ್ರೀ ವಾಟಾಳ್ ನಾಗರಾಜ್:- ಸಾರ್ ಪೇಜರ್ ತರುವುದೂ ಸರಿಯಿಲ್ಲ. ಪೇಜರ್‌ಗಳನ್ನು ಕಟ್ಟಿಕೊಂಡು ಅದು ಕೊಂಯ್ ಕೊಂಯ್ ಎನ್ನುವುದು. ನಾಳೆ ಅದು ಬಾಂಬ್ ಆಗಿ ಸಿಡಿದರೆ ಏನು ಗತಿ ಆಗುತ್ತದೆ? ಇಲ್ಲಿ ಏನೇನು ಆಗಬೇಕು? ಯಾರು ಏನು ಬೇಕಾದ್ದರು ತರಬಹುದೇ? ಈ ಸದನಕ್ಕೆ ಎಷ್ಟು ಪಾವಿತ್ರ್ಯತೆ ಇದೆ. ಸದನದ ಪಾವಿತ್ರ್ಯತೆ ಹಾಳಾಗತಕ್ಕದ್ದು ಆಗಬಾರದು. ತಾವು ದಯವಿಟ್ಟು ಇದರ ಬಗ್ಗೆ ಸೂಚನೆ ಕೊಡಬೇಕು. ನಾವುಗಳು ಎಲ್ಲಾ ನಿಮ್ಮ ಸ್ನೇಹಿತರು ಇರಬಹುದು. ಅಭಿಮಾನಿಗಳು ಇರಬಹುದು. ಈ ವಿಚಾರದಲ್ಲಿ ತಾವು ನಿರ್ದಾಕ್ಷಿಣ್ಯವಾಗಿ ಒಂದು ತೀರ್ಪು ಕೊಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಅವರನ್ನು ಮೊದಲು ಹೊರಗಡೆ ಕಳಿಸಿ. ಅವರು ಅದನ್ನು ಹೊರಗಡೆ ತೆಗೆದುಕೊಂಡು ಹೋಗಬೇಕು. ನಾನು ಹೇಳುತ್ತೇನೆ, ಅವರನ್ನು ಹೊರಗೆ ಕಳುಹಿಸಿ. ಅವರು ನನ್ನ ಸ್ನೇಹಿತರು ಇರಬಹುದು.

ಅಧ್ಯಕ್ಷರು:- ಇವತ್ತಿಗೆ ಅದನ್ನು ಆಫ್ ಮಾಡಿ ಇಟ್ಟುಕೊಂಡು ಬಿಡಿ. ಅದು ರಿಂಗ್ ಆಗದ ಹಾಗೆ ಆಫ್ ಮಾಡಿ ಇಟ್ಟುಕೊಳ್ಳಬಹುದು.

ಶ್ರೀ ಎಲ್.ಆರ್. ಶಿವರಾಮೇಗೌಡ:- ಅದನ್ನು ಆಫ್ ಮಾಡಿಯೇ ಇಟ್ಟುಕೊಂಡಿದ್ದೇನೆ. ಅವರು ಇಲ್ಲಿ ಬಂದು ನೋಡಿ ನಮಗೆ ಹೀಗೆ ತೊಂದರೆ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಮಾನ್ಯ ವಾಟಾಳ್ ಅವರು ಹೇಳಿದ್ದನ್ನು ನಾವು ತಮಾಷೆಗೆ ತೆಗೆದುಕೊಳ್ಳುವುದು ಬೇಡ. ತಮಾಷೆ ಇರುತ್ತದೆ. ಸದನದಲ್ಲಿ ನ್ಯೂಸ್‌ಪೇಪರ್ ಕೂಡ ಯಾರೂ ಓದುವ ಹಾಗೆ ಇಲ್ಲ. ಚರ್ಚೆ ನಡೆಯುತ್ತಿರತಕ್ಕ ವಿಷಯಕ್ಕೆ ಸಂಬಂಧಿಸಿದಂತೆ ಏನಾದರು ಉಲ್ಲೇಖ ಮಾಡುವುದು ಇದ್ದರೆ ಮಾತ್ರ ನ್ಯೂಸ್‌ಪೇಪರ್ ಇಟ್ಟುಕೊಳ್ಳಬಹುದೇ ಹೊರತು ಯಾರೂ ಹಾಗೆ ಇಟ್ಟುಕೊಳ್ಳಬಾರದು. ಛತ್ರಿ ಕೂಡ ಒಳಗಡೆ ತರುವುದಕ್ಕೆ ಬರುವುದಿಲ್ಲ. ಯಾರಾದರೂ ಅಂಗ ವೈಕಲ್ಯ ಇದ್ದರೆ ಅವರು ಪರ್ಮಿಷನ್ ತೆಗೆದುಕೊಂಡು ಒಳಗಡೆ ಬರಬೇಕಾಗುತ್ತದೆ. ಇವತ್ತು ತಂದಿದ್ದೀರಿ, ನಾಳೆಯಿಂದ ದಯಮಾಡಿ ತರಬೇಡಿ. ನಿಮಗೆ ಪಿ.ಎ. ಕೊಟ್ಟಿದ್ದೇವಲ್ಲಾ ಅವರ ಹತ್ತಿರ ಕೊಟ್ಟು ಬಿಡಿ. ಏನಾದರೂ ಅರ್ಜೆಂಟ್ ಇದ್ದರೆ ಚೀಟಿ ಕಳುಹಿಸುತ್ತಾರೆ. ಪೇಜರ್, ಸೆಲ್ಯುಲಾರ್ ಫೋನ್ ಯಾರೂ ಕೂಡ ಸದನದ ಒಳಗಡೆ ತರುವುದಕ್ಕೆ ಬರುವುದಿಲ್ಲ. ಯಾರೂ ತರಕೂಡದು. ಇವತ್ತು ಅದನ್ನು ಆಫ್ ಮಾಡಿ ಇಟ್ಟುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಕರಿ ಬಟ್ಟೆ ಸಹ ಇರುವ ಹಾಗೆ ಇಲ್ಲ. ಫ್ಲಾಗ್ ತರುವುದು ಬೇಡ. ತಾವು ಹೇಳಿದ್ದನ್ನು ಅಕ್ಷರಶಃ ನಾವು ಒಪ್ಪುತ್ತೇವೆ. ತಮ್ಮ ತೀರ್ಪಿಗೆ ನಾವ್ಯಾರೂ ವ್ಯತ್ಯಾಸ ಹೇಳುವುದಿಲ್ಲ. ಈ ಸದನದಲ್ಲಿ ಯಾರು ಇವತ್ತು ಹೇಳುತ್ತಾರೆ, ಅವರು ಬಿಂದಿಗೆ ತಂದಿದ್ದು ಉಂಟು. ಅವರೇ ಕರಿಯ ಬಟ್ಟೆ ಯಾವಾಗಲೂ ಒಂದು ಕವರ್‌ನಲ್ಲಿ ಇಟ್ಟುಕೊಂಡಿರುತ್ತಾರೆ. ಅದನ್ನು ತರದ ಹಾಗೆ ತಾವು ಆದೇಶ ಕೊಡಿ.

ಅಧ್ಯಕ್ಷರು:- ಚಿಂದಿಗೆನೂ ತರುವ ಹಾಗೆ ಇಲ್ಲ. ಹಪ್ಪಳ ಸಂಡಿಗೆನೂ ತರುವ ಹಾಗೆ ಇಲ್ಲ. ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಇದನ್ನು ಹಾಸ್ಯವಾಗಿ ನಾವು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು:- ನಾನು ಹೇಳಿದ್ದೇನಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಈಗ ಕಪ್ಪು ಬಟ್ಟೆ ತರುವುದಾಗಲೀ ಅಥವಾ ಬಿಂದಿಗೆ ತರುವುದಾಗಲೀ ತಂದ ತಕ್ಷಣ ತಾವು ಹೇಳಿದ ತಕ್ಷಣ ನಾವು ಹೊರಗಡೆ ಹೋಗಿ ಇಟ್ಟಿದ್ದೇವೆ. ತಾವು ಕೂಡಲೇ ಅವರನ್ನು ಹೊರಗೆ ಕಳುಹಿಸಿ. ಮೊದಲು ಅವರನ್ನು ಹೊರಗಡೆ ಕಳುಹಿಸಿ. ಈಗ ನಮ್ಮನ್ನು ತಾವು ಸುಮ್ಮನೇ ಬಿಟ್ಟಿಲ್ಲ. ಬಿಂದಿಗೆ ತೆಗೆದುಕೊಂಡು ಹೊರಗೆ ಹೋಗಿ ಎಂದು ಹೇಳಿದ್ದೀರಿ. ಹಿಂದಿನ ಅಧ್ಯಕ್ಷರು ನಾನು ಟಾರ್ ತಂದಾಗ ಕೂಡಲೇ ಹೊರಗಡೆ ಹೋಗಬೇಕು ಎಂದು ಮಾರ್ಷಲ್ ಕಳುಹಿಸಿ ತೆಗೆದುಕೊಂಡರು. ಅವರು ಹೋಗಲಿಲ್ಲ ಎಂದರೆ ಮಾರ್ಷಲ್ ಅವರನ್ನು ಕಳುಹಿಸಿ. ಎರಡರಲ್ಲಿ ಒಂದು ತೀರ್ಮಾನ ಆಗಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ:- ಒಂದು ವಿಚಾರ ಸನ್ಮಾನ್ಯ ಅಧ್ಯಕ್ಷರೆ, ತಾವು ಒಂದು ಒಳ್ಳೆಯ ತೀರ್ಪು ಕೊಟ್ಟಿದ್ದೀರಿ, ಅದನ್ನು ಆಫ್ ಮಾಡಿ ಇಟ್ಟುಕೊಳ್ಳಿ ಎಂದು. ಬಹುಶಃ ಅದು ಒಳ್ಳೆಯ ಸಲಹೆ. ಆದರೆ ಇತ್ತೀಚಿನ ದಿನಗಳಲ್ಲಿ ಪೇಜರ್ ಆಗಲೀ ಅಥವಾ ಸೆಲ್ಯುಲಾರ್ ಫೋನ್ ಆಗಲಿ ಮನುಷ್ಯನಿಗೆ ಅತ್ಯಗತ್ಯವಾಗಿ ಬೇಕಾಗುತ್ತದೆ. ಇಟ್ಟುಕೊಂಡಿರತಕ್ಕ ಸಂದರ್ಭದಲ್ಲಿ ಸದನದೊಳಗೆ ಬಂದ ತಕ್ಷಣ ತಾವು ಆಫ್ ಮಾಡಿ ಇಟ್ಟುಕೊಳ್ಳಿ ಎಂದು ತೀರ್ಪು ಕೊಟ್ಟಿರತಕ್ಕದ್ದು, ಅದನ್ನು ಒಪ್ಪಿಕೊಳ್ಳಬೇಕೇ?

ಅಧ್ಯಕ್ಷರು:- ಇಲ್ಲ ಇಲ್ಲ. ದಯಮಾಡಿ ನನ್ನ ಮಾತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ. ಕನ್ನಡದಲ್ಲಿ ನಾನು ಹೇಳುತ್ತಿದ್ದೇನೆ. ನಿಮಗೆ ಅರ್ಥ ಆಗುವ ಹಾಗೆ ನಾಗಮಂಗಲದ ಕನ್ನಡದಲ್ಲಿ ಹೇಳುತ್ತೇನೆ. ಈಗ ಆಫ್ ಮಾಡಿ ಇವತ್ತು ಸಾಯಂಕಾಲದವರೆಗೆ ತಾವು ಗಂಭೀರವಾಗಿ ಕುಳಿತುಕೊಳ್ಳಿ. ನಾಳೆಯಿಂದ ನೀವು ಒಳಗೆ ಬರುವಾಗ ಅದನ್ನು ತೆಗೆದುಕೊಂಡು ನೀವು ಬರಕೂಡದು.

ಶ್ರೀ ಎಲ್.ಆರ್.ಶಿವರಾಮೇಗೌಡ:- ನಾವು ಅಲ್ಲಿಂದ ತರುತ್ತೇವೆ, ಹೊರಗಡೆ ಕೊಟ್ಟರೆ ಹೇಗೆ?

ಅಧ್ಯಕ್ಷರು:- ಅದೂ ನೀವು ಇಬ್ಬರೂ ಒಟ್ಟಿಗೆ ಬರುವುದಕ್ಕೆ ಸಾಧ್ಯ ಇಲ್ಲ. ನೀವು ಇರಬಹುದು. ನಿಮಗಷ್ಟೇ ಜನ ಓಟು ಕೊಟ್ಟಿದ್ದಾರೆ. ಅದಕ್ಕೆ ಓಟು ಕೊಟ್ಟಿಲ್ಲ.